## ಓಎಸ್ ಸಂಖ್ಯೆಃ 76/2023 ಡಿಡಬ್ಲೂಃ2

## ದಿನಾಂಕಃ 20-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರ ವಕೀಲರಿಂದ**

ವಾದಿ ಮತ್ತು ಅವರ ಕುಟುಂಬದ ಬಗ್ಗೆ ಗೊತ್ತು. ದಾವಾ ಆಸ್ತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ ಅಲ್ಲ. ಸದ್ರಿ ವಾದಿಯರು ಎಲ್ಲಿ ಎಲ್ಲಿ ವಾಸವಾಗಿದ್ದಾರೆ ಎಂದು ಗೊತ್ತು. ಆಸ್ತಿಗಳಲ್ಲಿ ಪಾಲು ಆದ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿ ಮತ್ತು ಪ್ರತಿವಾದಿಯರು ಮೃತ ಹನುಮಂತಪ್ಪನ ಮಕ್ಕಳು ಎಂದರೆ ನಿಜ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ನನಗೆ ಅವುಗಳ ಬಗ್ಗೆ ಮೂಲ ಗೊತ್ತಿಲ್ಲ. ದಾವೆಯಲ್ಲಿ ಹಾಜರಾದ ನಂತರ ನಾನು ತಿಳಿದುಕೊಂಡಿರುತ್ತೇನೆ.

ಸದ್ರಿ ಆಸ್ತಿಗಳು ಹನುಮಂತಪ್ಪನ ಹೆಸರಿಗೆ ಇದ್ದ ಬಗ್ಗೆ ಗೊತ್ತು ಆದರೆ ಆತನ ಹೆಸರಿಗೆ ಹೇಗೆ ಬಂದವು ಎಂದು ಗೊತ್ತಿಲ್ಲ. ಸದ್ರಿ ನಾನು ಉತಾರೆ ದಾಖಲೆಗಳನ್ನು ನೋಡಿರುತ್ತೇನೆ ಆದರೆ ಬೇರೆ ಯಾವುದೇ ದಾಖಲೆಗಳನ್ನು ನೋಡಿಲ್ಲ. ಸದ್ರಿ ದಾವಾ ಆಸ್ತಿ ರಸ್ತೆಗೆ ತಾಗಿಕೊಂಡು ಇದೆ ಎಂದರೆ ಸರಿ ಅಲ್ಲ. ಅತ್ಯಂತ ಉತ್ಪನ್ನಭರಿತವಾದ ಬೆಳೆ ಬರುವ ಜಮೀನು ಎಂದರೆ ಸರಿ ಅಲ್ಲ ಹಾಳಾದ ಜಮೀನು ಎಂದು ಹೇಳುತ್ತಾರೆ. ನಾನು ಮತ್ತು 1 ರಿಂದ 4 ನೇ ಪ್ರತಿವಾದಿಯರು ಸೇರಿಕೊಂಡು ಖೊಟ್ಟಿ ಖರೀದಿ ಪತ್ರ ಸೃಷ್ಠಿ ಮಾಡಿದ್ದು ಕಾರಣ ವಾದಿಯರಿಗೆ ಸದ್ರಿ ಜಮೀನಿನಲ್ಲಿ ಹಿಸ್ಸೆ ಕೊಡಬಾರದು ಎಂಬ ಉದ್ದೇಶ ಇತ್ತು ಎಂದರೆ ಸರಿ ಅಲ್ಲ. ವಾದಿಯರು ಜಮೀನಿನಿಂದ ಸ್ವಲ್ಪ ದೂರದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ ಅಲ್ಲ. ನಾನು ಯಾವುದೇ ಪ್ರತಿಫಲ ಕೊಡದೇ ಖೊಟ್ಟಿ ರೀತಿಯಿಂದ ಖರೀದಿ ಪತ್ರ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ ಅಲ್ಲ. ಆದ್ದರಿಂದ ನಾನು ಮೌಲ್ಯಾಧಾರಿತ ಖರೀದಿದಾರನಲ್ಲ ಎಂದರೆ ಸರಿ ಅಲ್ಲ. ಈ ದಿನದವರೆಗೂ ವಾದಿಯರು ಮತ್ತು ಪ್ರತಿವಾದಿಯರು ಸಾಮೂಹಿಕವಾಗಿ ಕಬ್ಜಾ ವಹಿವಾಟಿನಲ್ಲಿದ್ದು ಉಪಭೋಗ ಮಾಡುತ್ತ ಬಂದಿರುತ್ತಾರೆ ಎಂದರೆ ಸರಿ ಅಲ್ಲ.

ವಾದಿಯರ ಸಹಿಯನ್ನು ಖರೀದಿ ಪತ್ರಕ್ಕೆ ಪಡೆದಿಲ್ಲ ಎಂದರೆ ನಿಜ ಆದರೆ ಅವರು ಮೌಖಿಕವಾಗಿ ಒಪ್ಪಿಗೆ ಸೂಚಿಸಿದ್ದರು. ವಾದಿಯರ ಒಪ್ಪಿಗೆ ಪತ್ರವನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿಲ್ಲ. ಸದ್ರಿ ವಾದಿಯರ ಒಪ್ಪಿಗೆ ಪಡೆಯದೇ ಇದ್ದರೂ ಸಹ ಅವರ ಒಪ್ಪಿಗೆ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಆದ್ದರಿಂದ ನಾನು ಮೌಲ್ಯಾಧಾರಿತ ಖರೀದಿದಾರನಲ್ಲ ಎಂದರೆ ಸರಿ ಅಲ್ಲ. ವಾದಿಯರಿಗೂ ಸಹ ದಾವಾ ಆಸ್ತಿಯಲ್ಲಿ ಹಿಸ್ಸೆ ಇದೆ ಎಂದರೆ ಸರಿ ಅಲ್ಲ. ಖೊಟ್ಟಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**ಪ್ರಭಾರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.**